## ಇಲ್ಲಿಯವರೆಗೆ

ಪಾದಯಾತ್ರೆ ನಡೆಸುವವರಿಗೆ ಅನುಕೂಲವಾಗುವಂತೆ ಆಗಾಗ ಶಕ್ತಿವರ್ಧಿತ ಪಾನೀಯ ನೀಡಲಾಗುತ್ತಿತ್ತು. ಜೊತೆಗೆ ತುರ್ತು ಚಿಕಿತ್ಸೆಗಾಗಿ ವೈದ್ಯರು ಹಾಗೂ ನರ್ಸ್‌ಗಳ ತಂಡವನ್ನೂ ವ್ಯವಸ್ಥೆಗೊಳಿಸಲಾಗಿತ್ತು. ಎಲ್ಲವೂ ಪೂರ್ವನಿಯೋಜಿತವಾಗಿರಬೇಕು ಎಂಬುದು ಹನ್ನಾಳ ಊಹೆಯಾಗಿತ್ತು. ನಗರದ ಜನ ಅಲ್ಲದೆ ಅಕ್ಕಪಕ್ಕದ ಜಿಲ್ಲೆ, ಹೊರರಾಜ್ಯಗಳಿಂದಲೂ ಜನ ಪಾದಯಾತ್ರೆಯಲ್ಲಿ ಭಾಗವಹಿಸಿ ಐಕ್ಯತೆ ಇರುವುದನ್ನು ಸಾಬೀತುಪಡಿಸಿದ್ದರು. ಅರೆಮಾನವರು ಹಾಗೂ ಆಡಳಿತ ವರ್ಗದವರ ಮಧ್ಯೆ ಜಟಾಪಟಿ ನಡೆದುದು ಕೂಡ ಸಾಬೀತಾಯಿತು. ದಿನದಿಂದ ದಿನಕ್ಕೆ ಅಪಘಾತಗಳ ಸಂಖ್ಯೆ ಹೆಚ್ಚಾಗುವುದು ಹಾಗೂ ಇದರಲ್ಲಿ ಆರೋಪಿತರ ಸಂಖ್ಯೆಯೂ ಹೆಚ್ಚಾಗುವುದರ ಬಗ್ಗೆ ದಾಖಲಾಗುವ ಮಾಹಿತಿಯಿಂದ ತಿಳಿಯುತ್ತದೆ.

ಈ ಮಧ್ಯೆ ಆರ್‌ಎನ್‌ಡಿ ವಿಭಾಗಕ್ಕೆ ಅವಿರತ್ ಹೋಗಿರುತ್ತಾನೆ. ಇದನ್ನು ರೋಬೊ ಮೂಲಕ ಹಾಗೂ ಕಂಪ್ಯೂಟರ್‌ನಲ್ಲಿ ದಾಖಲಾದ ಮಾಹಿತಿಯಿಂದ ಹನ್ನಾ ತಿಳಿದುಕೊಂಡು ಅತ್ತಲೇ ಹೆಜ್ಜೆ ಹಾಕುತ್ತಾಳೆ. ಅವಿರತ್ ಹಾಗೂ ಹನ್ನಾ ನಡುವೆ ಪ್ರೇಮಪಲ್ಲವಿ ಅಂಕುರಿಸುತ್ತದೆ.



ಮಾರ್ಪಾಡುಗಳು ಹಾಗೂ ಉತ್ತಮಪಡಿಸುವಿಕೆ ಮುಂದುವರಿಯುತ್ತಲೇ ಇರುತ್ತದೆ' ಎಂದು ನಡುವೆ ಅವಿರತ್ ಮಾತು ಸೇರಿಸಿದ.

'ಹೌದೇನು, ಇಲ್ಲಿ ಯಾವ ಕಟ್ಟಡದಲ್ಲಿ ಆ ಸಂಶೋಧನೆಗಳು ನಡೆಯುತ್ತಿವೆ ಎಂದು ತಿಳಿದುಕೊಳ್ಳಬಹುದಾ?' ಹನ್ನಾಳ ಕುತೂಹಲ ಗರಿಗೆದರಿತು.

'ಮ್ಯಾಮ್. ಅಲ್ಲಿಗೆ ಹೋಗಲು ವಿಶೇಷ ಅನುಮತಿ ಬೇಕಾಗುತ್ತದೆ. ಆದರೆ ನಿಮ್ಮ ರೊಬೋವನ್ನೇ ಇಲ್ಲಿ ಚಿಕಿತ್ಸೆಗೆ ಒಳಪಡಿಸಿರುವುದಲ್ಲದೆ ಟ್ರಾಫಿಕ್ ವಾರ್ಡನ್ ಆಗಿರುವುದರಿಂದ, ವಿನಾಯಿತಿ ಸಿಗಬಹುದು' ಶೈನಿಯ ಮಾತಿಗೆ ಅವಿರತ್ ಮರುನುಡಿದ.

'ಶೈನಿ... ಹನ್ನಾ... ನೀವು ಈ ಸಂಶೋಧನೆ, ಅಧ್ಯಯನ ಇತ್ಯಾದಿ ಚರ್ಚೆ ಮುಂದುವರಿಸಿ. ನನಗೆ ತನಿಖೆಗೆ ಕೆಲವು ಪ್ರಕರಣಗಳು ಬರುತ್ತಿವೆಯಾದ್ದರಿಂದ ಅದನ್ನು ಅಟೆಂಡ್ ಮಾಡಬೇಕಿದೆ. ಹೋಗಲು ಅನುಮತಿ ನೀಡಿ' ಎಂದು ಸವಿನಯವಾಗಿ ಕೇಳಿದಾಗ ಹನ್ನಾಳಿಗೆ ಇರುಸುಮುರಿಸೆನಿಸಿತ್ತು. ಬರುವಾಗ ಜೊತೆಯಲ್ಲಿ ಬಂದವರು ಹೀಗೆ ಹೊರಡುವಾಗ ಬೇರ್ಪಡುತ್ತಿರುವುದು ಹಿತವೆನಿಸಿರಲಿಲ್ಲ.

'ಆಯ್ತು. ಹನ್ನಾ ಮ್ಯಾಮ್‌ಗೆ ಈ ವಿಚಾರದ ಬಗ್ಗೆ ಬಹಳಷ್ಟು ಆಸಕ್ತಿ ಇದೆ ಅಂತಾ ಕಾಣುತ್ತೆ ಅವಿರತ್. ನಿಮಗೆ ಕೆಲಸವಿದ್ದರೆ ಹೋಗಲು ನನ್ನದೇನೂ ಅಭ್ಯಂತರವಿಲ್ಲ. ನಾನು ಮ್ಯಾಮ್ ಅವರ ಕುತೂಹಲವನ್ನು ಕಿಂಚಿತ್ತಾದರೂ ತಣಿಸಬೇಕಲ್ಲವೇ?'

ಅವಿರತ್ ಹನ್ನಾಳ ಮುಖದಲ್ಲಿ ಮೂಡಿದ ಅಸಮಾಧಾನವನ್ನು ಕಂಡೂಕಾಣದಂತೆ ಕೈ ಬೀಸಿ ಹೊರಡಲನುವಾಗಿದ್ದ. ಅವನು ಹೊರಡುವುದನ್ನೇ ಓರೆನೋಟದಿಂದ ದೃಷ್ಟಿಸುತ್ತಿದ್ದ ಹನ್ನಾಳ ಗಮನವನ್ನು ತನ್ನೆಡೆ ಸೆಳೆಯುತ್ತಾ ಶೈನಿ ಮಾತು ಮುಂದುವರಿಸಿದ್ದ.

'ಮ್ಯಾಮ್. ನಿಮ್ಮ ಎಕ್ಸ್ ರೊಬೋ ಸಂಪೂರ್ಣವಾಗಿ ದುರಸ್ತಿಗೊಂಡು ನಿಮಗೆ ಒಪ್ಪಿಸಲು ಇನ್ನೂ ಕೊಂಚ ಕಾಲಾವಕಾಶ ಬೇಕಾಗುತ್ತದೆ. ನಿಮಗೆ ಈ ಬಗ್ಗೆ ಸಂದೇಶ ತಲುಪಿಸಿದ್ದೇವೆ ನೋಡಿ' ಎಂದಾಗ ಹನ್ನಾ ತನ್ನ ಎಂ.ಪಿ. ವಾಕಿಯ ಸಂದೇಶಗಳನ್ನು ಹಿನ್ನಡೆಗೊಳಿಸಿ ನೋಡಿ 'ಓ...' ಎಂದು ಉದ್ಗರಿಸಿದಳು. ತಾನು ಅದನ್ನು ಗಮನಿಸಿರಲೇ ಇಲ್ಲವೆಂಬುದನ್ನು ಅವಳ ಮಾತು ಧ್ವನಿಸಿತ್ತು.

ಅಷ್ಟರಲ್ಲಿ ಅವಳಿಗೆ ಪಾಪ್ ಅಪ್ ಸಂದೇಶವೊಂದು ರವಾನೆಯಾಗಿತ್ತು. ಕೇವಲ ತುರ್ತು ಪರಿಸ್ಥಿತಿಗಳಲ್ಲಷ್ಟೇ ಅವಳಿಗೆ ಇಂತಹ ಕೆಂಪುಸಂದೇಶಗಳು ಬರುತ್ತಿದ್ದವಾದ್ದರಿಂದ ಕೂಡಲೇ ತನ್ನ ಸಂಚಾರ ನಿಯಂತ್ರಣ ಕೇಂದ್ರದ ಸಂಪರ್ಕಕ್ಕೆ ಬಂದಳು. ಅಲ್ಲಿಂದ ಧ್ವನಿಯೊಂದು ಕೇಳಿಸಿ ಅವಳಿಗೆ ಕೂಡಲೇ ಬುಲೆಟ್ ಮೆಟ್ರೋ ಸಂಚಾರ ಕಮೀಷನರ್‌ರವರ ಆದೇಶವನ್ನು ತಲುಪಿಸಿದ್ದಳು.

'ನೀವು ಹಾಲಿ ಕರ್ತವ್ಯ ನಿರ್ವಹಿಸಿದ್ದ ಹೊರವಲಯದ ಸ್ಥಳದಲ್ಲೇ ನಿಮಗೆ ಕರ್ತವ್ಯಕ್ಕೆ ನಿಯೋಜಿಸಿದ್ದು, ಕೂಡಲೇ ಸಜ್ಜಾಗಲು ತಿಳಿಸಿದ್ದಾರೆ. ಒಂದು ಕಮಾಂಡೋ ರೊಬೋ ಪಡೆಯೊಂದು ಸಹಾಯಕ್ಕೆ ಕಳುಹಿಸಲಿದ್ದೇವೆ.'

ಪೂರ್ವನಿಶ್ಚಿತ ಹಾಗೂ ಸಾಧಾರಣ ಪ್ರಸಂಗಗಳಾಗಿದ್ದರೆ ತನ್ನ ಇಬ್ಬರು ಸಹಾಯಕ ರೊಬೋಗಳಷ್ಟೇ ಸಾಕಾಗುತ್ತಿದ್ದರು. ಆದರೆ, ಇಂದೇಕೋ ಹಾಗೆ ಧ್ವನಿಸಿರಲಿಲ್ಲ. ಕೂಡಲೇ ತನ್ನ ಸಹಚರಳಾದ ಅನಘಾಳನ್ನು ತನ್ನ ಎಂ.ಪಿ. ವಾಕಿಯಲ್ಲಿ ಸಂಪರ್ಕಿಸಿದ್ದಳು.

'ಹನ್ಸ್, ಕೆಲವು ದಿನಗಳ ಹಿಂದೆ ಅರೆಮಾನವರ ಪಡೆ ಬೃಹತ್ ಪಾದಯಾತ್ರೆ ಕೈಗೊಂಡಿದ್ದ ವಿಚಾರ ನಿನಗೆ ಗೊತ್ತೇ ಇದೆ. ಅದರಲ್ಲಿ ಹಲವರು ಬೇರೆ ರಾಜ್ಯ–ನಗರಗಳಿಂದ ಬಂದವರಾಗಿದ್ದು, ಅವರೆಲ್ಲಾ ಆ ಪಾದಯಾತ್ರೆ ಮುಗಿದ ಬಳಿಕ ತಮ್ಮ ತಮ್ಮ ಪ್ರದೇಶಗಳಿಗೆ ವಾಪಸ್ಸಾಗಿಲ್ಲವಾದ್ದರಿಂದ ಸಮಸ್ಯೆ ಉದ್ಭವಿಸಿದೆ.'

'ಯಾಕೆ ಏನಾಯ್ತು?'

'ಅವರೆಲ್ಲಾ ಬರುವ ಮೊದಲೇ ನಿರ್ಧರಿಸಿದ್ದರೆಂದು ಕಾಣಿಸುತ್ತೆ. ಅವರೇನಾದರೂ ಈ ಜಾಗ ಬಿಡಬೇಕಾದರೆ ತಮ್ಮ ಜೀವನೋಪಾಯಕ್ಕೆ ಯಾವುದಾದರೊಂದು ಪರಿಹಾರ ನೀಡಿದ ಬಳಿಕವೇ ಎಂದು ನಿರ್ಧರಿಸಿರಬೇಕು. ನಮ್ಮ ಆಡಳಿತ ಕೇವಲ ಭರವಸೆಗಳ ಮಹಾಪೂರವನ್ನೇ ಹರಿಸುವುದರಲ್ಲಿ ನಿಷ್ಣಾತವಾದುದು. ಅವರ ಪೊಳ್ಳು ಭರವಸೆಗಳಿಗೆ ಮರುಳಾಗದೆ ಅರೆಮಾನವ ಪಡೆ ಸರ್ಜಿಕಲ್ ಸ್ಟ್ರೈಕ್‌ಗೆ ಮುಂದಾಗಿತ್ತು. ಇದನ್ನು ಮುಂಚಿತವಾಗಿಯೇ ಅರಿತ ಆಡಳಿತ ಶಕ್ತಿವಂತರಾಗಿದ್ದ ಅರೆಮಾನವ ಪಡೆಯ ಬಲವನ್ನು ಒಡೆಯಲು ನಿರ್ಧರಿಸಿದೆ.'

'ಅಂದರೆ?'

ವೆಬ್ ವಾರ್ತೆಗಳ ಕಡೆ ಒಂದೆರಡು ದಿನ ಗಮನಹರಿಸದಿದ್ದುದು ತನ್ನನ್ನು ಪ್ರಸ್ತುತ ಆಗುಹೋಗುಗಳಿಂದ ದೂರವಿರಿಸಿದಂತಾಗಿದೆ ಎಂದು ಹನ್ನಾಳಿಗೆ ಅನ್ನಿಸಿತು.

'ಹೊರ ರಾಜ್ಯ, ಜಿಲ್ಲೆ, ನಗರಗಳಿಂದ ಆಗಮಿಸಿ ವಾಪಸ್ಸು ಹೋಗದೆ ಆಡಳಿತದ ವಿರುದ್ಧ ಪಿತೂರಿ ನಡೆಸುತ್ತಿರುವುದು ಆಡಳಿತ ವರ್ಗಕ್ಕೆ ಹಿತವೆನಿಸದೆ ಅವರನ್ನೆಲ್ಲಾ ಗಡೀಪಾರು ಮಾಡಲು ನಿರ್ಧರಿಸಿದೆ.'

'ಗಡೀಪಾರೇ?! ಇದು ಅವರ ಹಕ್ಕುಗಳನ್ನು ಕಸಿದಂತಾಗದೆ... ಅವರ ಬೇಡಿಕೆ ಸಹ ಸಹಜವೆನಿಸದೆ?'

'ಹನ್ನಾ, ಹುಷಾರು. ಈ ವಿಷಯ ಆಡಳಿತವರ್ಗದ ಕಿವಿಗೆ ಬಿದ್ದೀತು. ಇದೆಲ್ಲಾ ಆರ್ಥಿಕ ಸ್ಥಿತಿಗತಿಯ ಮೇಲೆ ಅಪಾರ ಪರಿಣಾಮ ಬೀರಲಿದೆಯಾದ್ದರಿಂದ ಅವರು ಹೇಗೋ ಕಾಲ ತಳ್ಳಲು ನೋಡಿದರು. ಆದರೆ ಅರೆಮಾನವ ಪಡೆಯ ಒತ್ತಡ ಹೆಚ್ಚಾಗಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಈ ವಿಪರೀತ ಕ್ರಮಕ್ಕೆ ಮುಂದಾಗಿದೆ.'

'ಅಂದರೆ ನಮ್ಮ ಕೆಲಸ ಅರೆಮಾನವ ಪಡೆಯ ಗಡೀಪಾರಿನ ಮಧ್ಯೆ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ನೋಡಿಕೊಳ್ಳುವುದು.'

'ಅಷ್ಟೇ ಅಲ್ಲ. ನೀನೀಗ ಹೊರವಲಯದಲ್ಲಿರುವುದರಿಂದ ನಿನಗೆ